ಯೋಚನೆ ಮಾಡಬೇಕು ಮತ್ತು ಕ್ರಮ ತೆಗೆದುಕೊಳ್ಳಬೇಕು. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಥಮ ಪ್ರಶಸ್ತಿಯನ್ನು ಪಡೆದ ಈ ಕುಸ್ತಿ ಪಟುಗಳಿಗೆ ಆಹಾರ ಭತ್ಯೆ ಪ್ರವಾಸ ಭತ್ಯೆ ಇನ್ನಿತರ ಭತ್ಯೆಗಳನ್ನು ಕೊಡುವುದರ ಮೂಲಕ ಪ್ರೋತ್ಸಾಹ ನೀಡಬೇಕು. ರಾಜಕೀಯಕ್ಕೂ ಕುಸ್ತಿಗೂ ನೇರ ಸಂಬಂಧವಿರುವುದರಿಂದ ಸನ್ಮಾನ್ಯ ಸಚಿವರು ಇದರಲ್ಲಿ ವಿಶೇಷ ಆಸಕ್ತಿ ವಹಿಸಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು) : ಇಡೀ ಕರ್ನಾಟಕದಲ್ಲಿ ರಾಣೆಬೆನ್ನೂರು ಕುಸ್ತಿ ಪಟುಗಳಿಗೆ ಹೆಸರುವಾಸಿಯಾದುದು. ಇವತ್ತಿಗೂ ಸಹ ಅಲ್ಲಿ ಕುಸ್ತಿ ಪಟುಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಕರ್ನಾಟಕದಲ್ಲಿ ಯಾವುದಾದರೂ ಕಾನ್ಸ್‌ಟ್ಯೂಯೆನ್ಸಿ ಇರಲಿ ಅದರಲ್ಲಿ ರಾಣೆಬೆನ್ನೂರನ್ನು ಆರಿಸಿಕೊಂಡು ವಿಶೇಷವಾದ ಯೋಜನೆ ಒಂದನ್ನು ತಯಾರು ಮಾಡುವುದಕ್ಕೆ ಸರ್ಕಾರ ಗಮನ ಹರಿಸುತ್ತದೆಯಾ?

ಶ್ರೀ ಬಿ.ಕೆ. ಚಂದ್ರಶೇಖರ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಜಿಲ್ಲಾ ಪಂಚಾಯಿತಿಯವರಿಗೆ ಕೆಲಸ ವಹಿಸಿದ್ದೇವೆಂದು ಹೇಳಲಿಲ್ಲ. 17 ಲಕ್ಷ ರೂಪಾಯಿ ಮಂಜೂರಾತಿ ಆಗಿರುವ ವಿಚಾರ ಹೇಳಿದೆ. ಬೆಲ್ಲದ್‌ರವರು ಮತ್ತು ಇತರ ಮಾನ್ಯ ಸದಸ್ಯರು ಹೇಳಿದರು ಆ ಹಣ 50,000 ರೂಪಾಯಿ ಇದೆ ಅದು ಸಾಕಾಗುವುದಿಲ್ಲವೆಂದು ನಾನು ಇದನ್ನು ಮಾನ್ಯ ಯುವ ಜನ ಸೇವಾ ಸಚಿವರ ಗಮನಕ್ಕೆ ಇದನ್ನು ತಂದು ಯಾವ ಆಧಾರದ ಮೇಲೆ ಇದನ್ನು ಲೆಕ್ಕ ಹಾಕಿದ್ದಾರೆ, ಜಾಸ್ತಿ ಮಾಡುವುದಕ್ಕೆ ಸಾಧ್ಯವಿದೆಯಾ ಎಂದು ನೋಡುತ್ತೇನೆ. ಎರಡನೆಯದಾಗಿ ಕಬಡ್ಡಿ, ಕುಸ್ತಿ ಇಂಥ ನಮ್ಮ ಇಂಡೀಜಿನಸ್ ಗೇಮ್ಸ್‌ಗೆ ಈಗಾಗಲೇ ಎಲ್ಲಾ ಸರ್ಕಾರಗಳು ಇದಕ್ಕೆ ಉತ್ತೇಜನ ಕೊಟ್ಟುಕೊಂಡು ಬಂದಿದ್ದಾರೆ. ಕಳೆದ 10-12 ವರ್ಷಗಳಿಂದ ಕೊಟ್ಟ ಉತ್ತೇಜನವನ್ನು ನಮ್ಮ ಸರ್ಕಾರವೂ ಮುಂದುವರೆಸಿಕೊಂಡು ಬಂದಿದೆ. ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಕಬಡ್ಡಿ ಆಟಗಾರರಿಗೆ ಒಬ್ಬರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡುವುದಕ್ಕೆ ಸಾಧ್ಯವಾಗಿದೆ. ಈ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಇನ್ನಷ್ಟು ಬಜೆಟ್ ಸರ್ಕಾರ ಹೇಗೆ ಜಾಸ್ತಿಮಾಡಬೇಕೆಂದು ಆಲೋಚನೆ ಮಾಡುತ್ತದೆ.

ಅಧ್ಯಕ್ಷರು : ಶ್ರೀ ರವೀಂದ್ರನಾಥ್‌ರವರ ಪ್ರಶ್ನೆಗೆ ಸರ್ಕಾರದವರು ಸಮಯ ಕೇಳಿದ್ದಾರೆ.

ಶ್ರೀ ಎಸ್.ಎ. ರವೀಂದ್ರನಾಥ್ : ಸಕ್ಕರೆ ಕಂಪನಿ ಬಗ್ಗೆ ಯಾವುದೇ ಪ್ರಶ್ನೆ ಕೇಳಿದರೂ ಸಮಯ ಕೇಳುತ್ತಾರೆ.

ಶ್ರೀ ಎ. ಕೃಷ್ಣಪ್ಪ : ಸಕ್ಕರೆ ಮತ್ತು ಪಶುಸಂಗೋಪನೆ ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಪ್ರಶ್ನೆ ಇರುವುದರಿಂದ ನಾವು ಅವರಿಗೆ ಬರೆದಿದ್ದೇವೆ. ಅವರಿಂದ ಉತ್ತರ ಬಂದ ನಂತರ ಕೊಡುತ್ತೇವೆ.

ಬಾಗಲಕೋಟೆ ನಗರಕ್ಕೆ ಸಭಾಮಂದಿರ ನಿರ್ಮಾಣ

578 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಾಗಲಕೋಟೆ ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರವಾದ ಬಾಗಲಕೋಟೆಯ ನವ ನಗರಕ್ಕೊಂದು ಸುಸಜ್ಜಿತ ಸಭಾಮಂದಿರ ಅಥವಾ ಕಲಾಭವನದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯರು) :

ಅ) ಬಂದಿದೆ.

ಆ) 1. ಬಾಗಲಕೋಟೆ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ರಂಗಮಂದಿರ ನಿರ್ಮಾಣ ಮಾಡಲು ಸ್ಥಳ ನಿಗಧಿ, ಕಟ್ಟಡದ ಅಂದಾಜು ಪಟ್ಟಿ, ನೀಲಿ ನಕಾಶೆ ಹಾಗೂ ಸಾರ್ವಜನಿಕ ವಂತಿಕೆಗಳ ಸಂಗ್ರಹ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ.

2. ಸುಮಾರು ರೂ. 205 ಲಕ್ಷಗಳ ಅಂದಾಜಿನಲ್ಲಿ ರಂಗಮಂದಿರ ನಿರ್ಮಾಣ ಮಾಡಲು ಉದ್ದೇಶಿಸಿದೆ.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಮುಳುಗಡೆ ಮಾಡುವುದರ ಜೊತೆಗೆ ಸರ್ಕಾರ ಕಲೆ, ಸಂಸ್ಕೃತಿ ಮತ್ತು ಜಾನಪದಗಳನ್ನು ಮುಳುಗಡೆ ಮಾಡುವುದಕ್ಕೆ ಹೊರಟಿದೆ. ಬಾಗಲಕೋಟೆಯಲ್ಲಿ ಕಲಾಭವನದ ಅವಶ್ಯಕತೆ ಇದೆ, ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಸನ್ಮಾನ್ಯ ಸಚಿವರು ಹೇಳಿದ್ದಾರೆ. ಅದರ ಸಲುವಾಗಿ 205 ಲಕ್ಷ ರೂಪಾಯಿಗಳ ಅಂದಾಜನ್ನು ಮಾಡಿರುವುದಾಗಿ ತಿಳಿಸಿದ್ದಾರೆ. ಹಣದ ಅಂದಾಜನ್ನು ಎಂದು ಮಾಡಿದ್ದೀರಿ ಈ ಹಣವನ್ನು ಇದೇ ಆಯವ್ಯಯದಲ್ಲಿ ಸೇರಿಸಿದ್ದೀರೋ ಹೇಗೆ? ಅಥವಾ ಬರುವಂತಹ ಆಯವ್ಯಯದಲ್ಲಿ ಸೇರಿಸುವಂತಹ ಆಲೋಚನೆ ಇದೆಯೋ ಹೇಗೆ? ಈ ಕಟ್ಟಡ ನಿರ್ಮಾಣಕ್ಕಾಗಿ ಒಂದು ನಿಶ್ಚಿತ ಅವಧಿಯನ್ನು ಗೊತ್ತುಪಡಿಸುವ ಕ್ರಮ ತೆಗೆದುಕೊಳ್ಳುತ್ತೀರೋ ಹೇಗೆ? ಎನ್ನುವುದನ್ನು ನಾನು ಕೇಳುತ್ತಿದ್ದೇನೆ. ಹುಬ್ಬಳ್ಳಿಯಲ್ಲಿ ಸವಾಯಿ ಗಂಧರ್ವ ಹಾಲ್ ಇದೆ, ಧಾರವಾಡದಲ್ಲಿ ಮಲ್ಲಿಕಾರ್ಜುನ ಮನ್ಸೂರ್ ರಂಗ ಮಂದಿರ ಇದೆ. ಎಲ್ಲಾ ಕಡೆ ಒಂದೊಂದು ರಂಗ ಮಂದಿರ ಇದ್ದಂತಹ ಸಂದರ್ಭದಲ್ಲಿ ಬಾಗಲಕೋಟೆ ಜಿಲ್ಲಾ ಕೇಂದ್ರವಾಗಿರುವುದರಿಂದ ಅಲ್ಲಿ ರಂಗಮಂದಿರದ ಅವಶ್ಯಕತೆ ಇದೆ. ಆದುದರಿಂದ ಅಲ್ಲಿ ರಂಗಮಂದಿರವನ್ನು ಸ್ಥಾಪನೆ ಮಾಡಬೇಕೆಂದು ನಾನು ಸರ್ಕಾರವನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀಮತಿ ರಾಣಿ ಸತೀಶ್ : ಮಾನ್ಯ ಅಧ್ಯಕ್ಷರೇ, ಈ ವರ್ಷದ ಕಾರ್ಯಕ್ರಮದ ಅಡಿಯಲ್ಲಿ ಈ ಜಿಲ್ಲಾ ರಂಗಮಂದಿರಗಳನ್ನು ತರತಕ್ಕಂತಹ ಆಲೋಚನೆ ಇದೆ. ಈಗಾಗಲೇ ನಾವು ಪ್ರತಿ ವರ್ಷ ಒದಗಿಸುವ ಹಾಗೆ ಈ ವರ್ಷವೂ 28 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ, ಈ ರಂಗಮಂದಿರಕ್ಕೂ ಹಣವನ್ನು ಒದಗಿಸತಕ್ಕಂತಹ ಜವಾಬ್ದಾರಿ ಸರ್ಕಾರಕ್ಕೆ ಇದೆ. ಅದನ್ನು ಈ ವರ್ಷದ ಯೋಜನೆ ಅಡಿಯಲ್ಲಿ ತೆಗೆದುಕೊಳ್ಳುತ್ತೇವೆ.